ವರ್ತಿಸುತ್ತಿದೆ. ಪ್ರಳಯವೇ ಸನ್ನಿಹಿತವಾಗಿದೆಯೋ ಹೇಗೆ?' ಎಂದು ನುಡಿದು ಉಸಿರು ಸಿಕ್ಕಿಕೊಂಡವನಂತೆ ನೆಲಕ್ಕುರುಳಿದ.

ಶೆಡ್ಡಿನ ಒಬ್ಬನೇ ಒಬ್ಬನಿಗಾದರೂ ಪ್ರಶ್ನೆಗಳಿಗೆ ಉತ್ತರ ಸಿಕ್ಕಿರಲಿಲ್ಲ. ಸಲಹೆಗಳಿಗೆ ಅವರವರೇ ಪರಸ್ಪರ ಕಾಡುತ್ತ, ಬೇಡುತ್ತ, ಪುಸಲಾಯಿಸುತ್ತ, ರೇಗುತ್ತ, ಜಬರದಸ್ತು ಮಾಡುತ್ತ, ಜಗಳ ಕಾಯುತ್ತ, ಹೊಡೆದಾಡುತ್ತಾ ಇರುವಾಗ ಕಾಲ ಯಾರಿಗೂ ಗೊತ್ತಾಗದ ಹಾಗೆ ನಿಧಾನವಾಗಿ ಸಿಂಬಳದ ಹುಳುವಿನಂತೆ ತೆವಳುತ್ತಿತ್ತು. ಯಾರ ಬಳಿಯೂ ವಾಚು, ಮೊಬೈಲು, ಕಂಪ್ಯೂಟರು, ಕ್ಯಾಲೆಂಡರು ಇಲ್ಲದೆ ದಿನ, ದಿನಾಂಕ, ತಿಂಗಳು, ವರ್ಷಗಳು ಕಲಸಿ ಹೋದವು. ದಿನದ ಇಪ್ಪತ್ನಾಲ್ಕು ಗಂಟೆಯೂ ಹಗಲಿದ್ದ ದೇವಲೋಕದಲ್ಲಿ ರಾತ್ರಿ ಎಂಬುದೇ ಇರಲಿಲ್ಲವಾಗಿ ಜನರಿಗೆ ಕಾಲಗಣನೆಯ ಹಳಿಯೇ ತಪ್ಪಿಹೋಗಿತ್ತು.

ದೇವಲೋಕದ ಮೇಲ್ವಿಚಾರಕರಿಂದ ಜನರ ಸುದ್ದಿ ಸಮಾಚಾರ, ದೂರು ದುಮ್ಮಾನಗಳು ದೈವಕ್ಕೆ ತಲುಪಿದವು. ಜನರ ಕೆಮ್ಮು, ದಮ್ಮು, ಮೈ ಕೈ ಕೆರೆಯುವ ಪರಪರ ಶಬ್ದ ದೈವಕ್ಕೆ ಕೇಳಿಸಿತು. ಆದರೆ ಇದಕ್ಕಿಂತ ಜೋರಾಗಿ ಕೇಳಿಸಿತು ಜನರ ಹುಚ್ಚು ನಗೆಯ ಗಹಗಹ! ಜನರು ನಗುತ್ತಾ ಆರಾಮಿದ್ದಾರೆ ಎಂದಿತು ದೈವ. ಜನರ ಗಬ್ಬುನಾತ, ಮುಲುಕು, ನರಳಾಟ ದೇವಲೋಕವ ಮುಟ್ಟಿತು. ಆದರೆ ಈ ಎಲ್ಲ ಶಬ್ದಗಳನ್ನೂ ಮುಳುಗಿಸಿತು ಹುಚ್ಚು ನಗೆಯ ಗಹಗಹ!. ಜನರು ತೊಂದರೆಯಲ್ಲಿಲ್ಲ ಎಂದು ಬಗೆದ ದೈವ ಜಪ್ಪೆನ್ನಲ್ಲಿಲ್ಲ. ತನ್ನ ಅಭಿಪ್ರಾಯವನ್ನು ಬದಲಾಯಿಸಲಿಲ್ಲ. ಜನರ ಅಶಾಂತಿಯೇ ಕಿಡಿಯಾಗತೊಡಗಿತು. ವಾತಾವರಣದ ಬಿಸಿ ಏರತೊಡಗಿತು. ಸ್ಫೋಟದ ಹಿಂದಿನ ದಿನಗಳ ತಳಮಳ ಕುದಿಯತೊಡಗಿತು.

ಆಗ ಇದ್ದಕ್ಕಿದ್ದಂತೆ ಇಡೀ ದೇವಲೋಕವೇ ಸಂಚಲನಕ್ಕೀಡಾದಂತೆ ಒಬ್ಬ ಅಜ್ಜ ಮುಂದೆ ಬಂದ. ಅವನದ್ದು ಮನುಷ್ಯರೆಲ್ಲರೂ ಅರ್ಥ ಮಾಡಿಕೊಳ್ಳುವಂಥ ಲೋಕಭಾಷೆಯಾಗಿತ್ತು. ಅವನು ದ್ವೇಷವನ್ನೇ ಅರಿಯದ ವಿನಯಶೀಲನಾಗಿದ್ದ. ಎಂಥ ಪರಮ ಪಾಪಿಷ್ಠನನ್ನೂ ಸಹ ತನ್ನ ಇರುವಿಕೆಯಿಂದಲೇ ಮೃದುಗೊಳಿಸಬಲ್ಲವನಾಗಿದ್ದ. ಕಲ್ಮಶವೇ ಇಲ್ಲದ ಅವನ ಒಳಗು ಮುಖದ ಮೇಲೆ ಮಂದಹಾಸವಾಗಿ ಹಬ್ಬಿ ನಿಂತಿತ್ತು. ಕಿವಿಯಿಂದ ಕಿವಿಗೆ ಮಕ್ಕಳಂತೆ ನಕ್ಕು ಅವನ ಬಾಯಿ ಮತ್ತು ಕಿವಿಗಳು ದೊಡ್ಡದಾಗಿದ್ದವು. ಅವನು ಸರಳತೆಯ ಸಾಕಾರಮೂರ್ತಿಯಾಗಿದ್ದನು. ನೋಡುನೋಡುತ್ತಿದ್ದಂತೆ ತೂಕಡಿಸುತ್ತಿದ್ದವರು, ಮಲಗಿದ್ದವರು ಎದ್ದು ಮೈ ಕೈ ಬಟ್ಟೆ ಬರೆ ಕೊಡವಿಕೊಂಡರು. ಅಜ್ಜನ ಮಾತಿಗೆ ಔಷಧದ ಗುಣವಿತ್ತು. ಅವನ ಧ್ವನಿಗೆ ಸಂಗೀತದ ಸ್ಪರ್ಶವಿತ್ತು. ಅವನ ಆತ್ಮವಿಶ್ವಾಸ, ಧೈರ್ಯ ಸಾಂಕ್ರಾಮಿಕವಾಗಿದ್ದವು. ಜನ ಇವನಾರೋ ತಮಗಾಗಿ ಅವತರಿಸಿದ ಪ್ರವಾದಿ ಇರಬೇಕೆಂದುಕೊಂಡರು. ಮಂತ್ರಮುಗ್ಧರಂತೆ ಅವನ ಹಿಂದೆ ನಡೆದರು. ಅಜ್ಜ ಕಿಂದರಿಜೋಗಿಯಂತೆ ಮುನ್ನಡೆದ. ಜನ ಅವನ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ನಡೆದರು. ನೆರಳಿನಂತೆ ಹಿಂಬಾಲಿಸಿದರು. ಅಜ್ಜನ ಮೈಮೇಲೆ ಎರಡು ತುಂಡು ಬಟ್ಟೆಯಿದ್ದವು. ಹತ್ತಿರದಲ್ಲಿದ್ದ ಮರದ ಗೆಲ್ಲೊಂದನ್ನು ಮುರಿದುಕೊಂಡು ಊರುಗೋಲು ಮಾಡಿಕೊಂಡಿದ್ದ.

ಮೌನ ಕಿವಿಗಳಿಗೆ ಅಪ್ಪಳಿಸುತ್ತಿತ್ತು. ಜನಸಮೂಹ ಹಕ್ಕಿಗಳಂತೆ ಸುತ್ತಲೂ ಕತ್ತು ತಿರುಗಿಸುತ್ತ 'ಮುಂದೇನು?' ಎಂಬಂತೆ ಚಡಪಡಿಸುತ್ತ ನಿಂತರು. ಇಡೀ ವಾತಾವರಣವೇ ಉದ್ವಿಗ್ನತೆಯಿಂದ ತುಂಬಿತ್ತು. ಆಗ ದಿಗ್‌ದಿಗಂತಗಳ ಶೂನ್ಯದಿಂದ ಹೊರಟ ದೈವದ ಮಾತುಗಳು ಕೇಳತೊಡಗಿದವೇ ವಿನಃ ಕಣ್ಣಿಗೆ ಯಾವ ರೂಪವೂ ಕಾಣಿಸುತ್ತಿರಲಿಲ್ಲ. ದೈವ ಮತ್ತು ಅಜ್ಜನ ಮಾತುಗಳು ಬಿಟ್ಟರೆ ಏನೂ ಕೇಳದಂತಿತ್ತು.

ಜನರ ಗುಂಪು ದೈವದ ಎದುರಾಯಿತು. ಜನರ ಮುಂದೆ ನಿಂತಿದ್ದ ಅಜ್ಜ ಶೂನ್ಯಕ್ಕೆ ತಲೆಬಾಗಿ ವಂದಿಸಿ, 'ಕರುಣಾಮಯಿಯಾದ ದೇವರೇ ಕ್ಷಮಿಸಿಬಿಡು ನಾವರಿಯದೆ ಮಾಡಿದ ತಪ್ಪುಗಳ ಅಥವಾ ಉಡಾಫೆಯಲ್ಲಿ ಎಸಗಿದ ಪಾಪಗಳ. ನಿನ್ನ ಆಶೀರ್ವಾದ ಪಡೆದೇ ನಾವು ಭೂಲೋಕದಲ್ಲಿ ಹುಟ್ಟಿದೆವು. ನೀನು ಅನುಮತಿಸಿದಷ್ಟು ಕಾಲ ಮಾತ್ರ ಅಲ್ಲಿದ್ದೆವು. ನಿನ್ನ ಅಥವಾ ನಿನ್ನ ಸೃಷ್ಟಿಯ ಅಗಾಧತೆ ನಮ್ಮ ಗ್ರಹಿಕೆಗೆ ದಕ್ಕುತ್ತಿಲ್ಲ. ನಮ್ಮ ಸೀಮಿತ ಜ್ಞಾನದಲ್ಲಿ ಅದರ ಆಳ ಅಗಲಗಳನ್ನು ತಡಕುತ್ತಿದ್ದೇವೆ. ಲಕ್ಷಾಂತರ ವರ್ಷಗಳನ್ನು ಸವೆಸಿದರೂ ಅದರ ಎಲ್ಲೆಗಳೇ ನಮಗೆ ಎಟುಕುತ್ತಿಲ್ಲ. ಇದರ ನಿಗೂಢ ದಿನ ದಿನಕ್ಕೆ ದಟ್ಟವಾಗುತ್ತಿದೆಯೇ ಹೊರತು ತಿಳಿಯಾಗುತ್ತಿಲ್ಲ ಪ್ರಭುವೇ'